

ಕನ್ನಡ-ಸಂಸ್ಕೃತ ವಿದ್ವಾನ್ ಎನ್. ರಂಗನಾಥ ಶರ್ಮ ಅವರನ್ನು ಶನಿವಾರ ಬೆಂಗಳೂರಿನಲ್ಲಿ ಸನ್ಮಾನಿಸಲಾಯಿತು. ಎಡದಿಂದ ಬಲಕ್ಕೆ ಪಂಜಾಬ್ ಹೈಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿ ರಾಮಾ ಜೋಯಿಸ್, ರಾಜ್ಯ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್, ಸಾಹಿತಿ ಡಾ. ಹಾ.ಮಾ. ನಾಯಕ ಅನಂದನಾ ಸಮಿತಿ ಅಧ್ಯಕ್ಷರು, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ, ವಿದ್ವಾನ್ ರಂಗನಾಥ ಶರ್ಮ, ಭಾರತದ ನಿವೃತ್ತ ಮುಖ್ಯನ್ಯಾಯಮೂರ್ತಿ ರಂಗನಾಥ ಮಿಶ್ರಾ, ಸಂಸ್ಕೃತ ವಿದ್ವಾನ್ ಮಂಡನ ಮಿಶ್ರ ಸಾಹಿತಿ ಪ್ರೊ. ಎಸ್. ರಾಮಚಂದ್ರಶಾಸ್ತ್ರಿ, ಕನ್ನಡ ಪ್ರಾಧಿಕಾರದ ಅಧ್ಯಕ್ಷ ಜಿ. ನಾರಾಯಣ, ಶ್ರೀರಂಗ ಪ್ರಿಯ ಸ್ವಾಮಿಗಳು ಚಿತ್ರದಲ್ಲಿದ್ದಾರೆ.

# ಪಂ. ರಂಗನಾಥಶರ್ಮರಿಗೆ ಆತ್ಮೀಯ ಸನ್ಮಾನ

ಬೆಂಗಳೂರು, ಏ. ೨೩- ಕನ್ನಡ-ಸಂಸ್ಕೃತ ಸಾಹಿತ್ಯದ ಉದ್ದಾಮ ಪಂಡಿತ ವಿದ್ವಾನ್ ಎನ್. ರಂಗನಾಥ ಶರ್ಮ ಅವರನ್ನು ನಗರದಲ್ಲಿ ಇಂದು ನಡೆದ ಸಮಾರಂಭದಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ಸುಪ್ರೀಂ ಕೋರ್ಟಿನ ಇಬ್ಬರು ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಇ.ಎಸ್. ವೆಂಕಟರಾಮಯ್ಯ, ರಂಗನಾಥ ಮಿಶ್ರಾ, ರಾಜ್ಯ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಸೇರಿದಂತೆ ಅನೇಕ ಗಣ್ಯರ ಉಪಸ್ಥಿತಿಯಲ್ಲಿ ನಡೆದ ಈ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಎಲ್ಲ ಗಣ್ಯರೂ ರಂಗನಾಥ ಶರ್ಮರ ಸಾಹಿತ್ಯ ಸೇವೆಯನ್ನು ಮುಕ್ತಕಂಠದಿಂದ ಕೊಂಡಾಡಿದರು.

ಆರಂಭದಲ್ಲಿ ಅಭಿನಂದನಾ ಭಾಷಣ ಮಾಡಿದ ನಿವೃತ್ತ ಮುಖ್ಯ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಅವರು ಮಂಕುತಿಮ್ಮನ ಕಗ್ಗದಂತಹ ಶ್ರೇಷ್ಠ ಕೃತಿಯನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಡಿ.ವಿ. ಗುಂಡಪ್ಪನವರ ಸಹವರ್ತಿಯಾಗಿ ಅವರ 'ಮರಳು ಮುನಿಯ' ಕಾವ್ಯವನ್ನು ಸಂಪಾದಿಸಿದ ಶರ್ಮರದು ಅಪೂರ್ವ ವ್ಯಕ್ತಿತ್ವ ಎಂದು ಪ್ರಶಂಸಿಸಿದರು.

ಅಭಿನಂದನಾ ಭಾಷಣ ಮಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಾರಾಯಣ ಈ ಸಮಾರಂಭ ರಾಷ್ಟ್ರಮಟ್ಟದ ಖ್ಯಾತಿ ಗಳಿಸಿದೆ ಎಂದರು.

ಮೈಸೂರು ಮಹಾರಾಜರ ಕಾಲದಲ್ಲಿ ವಿರಚಿತವಾದ 'ಕೃಷ್ಣ ರಾಜವಾಣಿ ವಿಲಾಸ ಮಹಾಭಾರತ' ಕೃತಿಯನ್ನು ಪುನರ್ ರಚಿಸಲು ಮುಂದಾಗಬೇಕೆಂದು ಕೋರಿದ ಅವರು ಇದಕ್ಕೆ ಎಲ್ಲ ಅಗತ್ಯ ನೆರವನ್ನು ಒದಗಿಸುವುದಾಗಿ ತಿಳಿಸಿದರು.

ಸಂಸ್ಕೃತ ಸಾಹಿತ್ಯ ಲೋಕಕ್ಕೆ ಅನೇಕ ದಿಗ್ಗಜರನ್ನು ನೀಡಿದ ಬೆಂಗಳೂರು ಸಂಸ್ಕೃತ ಕಾಲೇಜಿನ ದುಃಸ್ಥಿತಿಯ ಬಗ್ಗೆ ವಿಷಾದಿಸಿದ ಅವರು, ೧೦೦ ವರ್ಷ ತುಂಬಿರುವ ಈ ಕಾಲೇಜು ಮುಳ್ಳು ಕಲ್ಲು ಗಿಡಗಂಟೆಗಳಿಂದ ಕೂಡಿದೆ. ಈ ಕಟ್ಟಡದ ಅಭಿವೃದ್ಧಿ ಜೊತೆಗೆ ಕಾಲೇಜಿನ ಶತಮಾನೋತ್ಸವ ಆಚರಣೆ ಮಾಡಬೇಕೆಂದು ಸಲಹೆ ಮಾಡಿದರು.

ಸಮಾರಂಭದಲ್ಲಿ ಮಾತನಾಡಿದ ಪಂಜಾಬ್ ಹೈಕೋರ್ಟಿನ ಮಾಜಿ ಮುಖ್ಯ ನ್ಯಾಯಾಧೀಶ ಎಂ. ರಾಮಾ ಜೋಯಿಸ್ ಮನುಷ್ಯ ಧರ್ಮ ಮಾರ್ಗದಲ್ಲಿ ನಡೆಯಬೇಕೆಂದರೆ ಸರಿಯಾದ ಮಾರ್ಗದರ್ಶನ ಅಗತ್ಯವಿದೆ ಎಂದರು.

**ಹಾ.ಮಾ.ನಾ ಟೀಕೆ:** ರಂಗನಾಥ ಶರ್ಮ ಅವರ ಕುರಿತು ತಂದಿರುವ ಅಭಿನಂದನಾ ಗ್ರಂಥ 'ರಂಗಾಭಿನಂದನ'ದ ಕನ್ನಡ ಆವೃತ್ತಿಯನ್ನು ಬಿಡುಗಡೆ ಮಾಡಿದ ಸಾಹಿತಿ ಹಾ.ಮಾ. ನಾಯಕ ಸರ್ಕಾರದ ಭಾಷಾ ನೀತಿಯನ್ನು ಕಟುವಾಗಿ ಟೀಕಿಸಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಗನಾಥ ಮಿಶ್ರ ಅವರು ರಂಗನಾಥ ಶರ್ಮರಿಗೆ ಸಂದಿರುವ ಅಭಿನಯ ಸಕಾಲಿಕ ಹಾಗೂ ಶ್ರೇಷ್ಠತೆಯುಳ್ಳದ್ದು ಎಂದರು.

'ರಂಗಾಭಿನಂದನ' ಗ್ರಂಥದ ಸಂಸ್ಕೃತ ಆವೃತ್ತಿಯನ್ನು ಬಿಡುಗಡೆ ಮಾಡಿ ವಿದ್ವಾನ್ ಮಂಡನ ಮಿಶ್ರಾ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕವಿ ಡಾ. ಪು.ತಿ. ನರಸಿಂಹಾಚಾರ್ ವಹಿಸಿದ್ದರು. ಪ್ರೊ. ಎಸ್. ರಾಮಚಂದ್ರಶಾಸ್ತ್ರಿ ಮಾತನಾಡಿದರು.

ತಮಗಿತ್ತ ಸನ್ಮಾನಕ್ಕೆ ವಿದ್ವಾನ್ ರಂಗನಾಥ ಶರ್ಮರು ಕೃತಜ್ಞತೆ ಸಲ್ಲಿಸಿದರು. ಸಮಾರಂಭದಲ್ಲಿ ಶ್ರೀರಂಗ ಪ್ರಿಯ ಸ್ವಾಮೀಜಿ ಆಶೀರ್ವಚನ ನೀಡಿದರು. ಕಾರ್ಯಕ್ರಮಕ್ಕೆ ಮುನ್ನ ವಿದ್ವಾನ್ ರಂಗನಾಥ ಶರ್ಮರನ್ನು ವೇದ ಘೋಷ-ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ವೇದಿಕೆಗೆ ಕರೆತರಲಾಯಿತು.

ಆರಂಭದಲ್ಲಿ ಅಭಿನಂದನಾ ಸಮಿತಿ ಅಧ್ಯಕ್ಷರೂ ಆದ ಭಾರತದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಸ್ವಾಗತಿಸಿದರು.

# 'ಕನ್ನಡ, ಸಂಸ್ಕೃತ ಭಾಷೆಯ ಅಮೋಘ ಸಾಧಕ'

ಬೆಂಗಳೂರು, ಏ. ೨೩- ಕನ್ನಡ ಮತ್ತು ಸಂಸ್ಕೃತದ ಎರಡೂ ಭಾಷೆಗಳ ಸಾಹಿತ್ಯ ರಚನೆಯಲ್ಲಿ ವಿದ್ವಾನ್ ಎನ್. ರಂಗನಾಥ ಶರ್ಮರು ಗಳಿಸಿರುವ ಸಾಧನೆ ಅಮೋಘವಾದುದೆಂದು ಕನ್ನಡ ಭಾಷೆಯ ಪ್ರಸಿದ್ಧ ವಿದ್ವಾಂಸರಾದ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರು ಹೇಳಿದರು.

ನಗರದ ಕುವೆಂಪು ಕಲಾಕ್ಷೇತ್ರದಲ್ಲಿ ವಿದ್ವಾನ್ ಎನ್. ರಂಗನಾಥ ಶರ್ಮ ಅವರಿಗೆ ಇಂದು ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು 'ರಂಗ ಪ್ರಶಂಸೆ' ಕಾರ್ಯಕ್ರಮಕ್ಕೆ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಸಂಸ್ಕೃತ ಭಾಷೆ ಮತ್ತು ಸಾಹಿತ್ಯದಲ್ಲಿ ಪಾಂಡಿತ್ಯವನ್ನು ಪಡೆದಿದ್ದ ಶರ್ಮರು, ಕನ್ನಡದಲ್ಲಿಯೂ ಸಹಾ ಹಲವಾರು ಸಾರ್ಥಕ ಗ್ರಂಥ ಮತ್ತು ಕೃತಿಗಳನ್ನು ರಚಿಸಿ, ಕನ್ನಡ ಮತ್ತು ಸಂಸ್ಕೃತ ಭಾಷೆಗಳ ನಡುವೆ ಸೌಹಾರ್ದಯುತವಾದ ಸಂಬಂಧವನ್ನುಂಟುಮಾಡುವಲ್ಲಿ ಯಶಸ್ವಿಯಾಗಿದ್ದಾರೆಂದು ಅವರು ನುಡಿದರು.

ರಂಗನಾಥ ಶರ್ಮರು ತಮ್ಮ ಬರಹದಲ್ಲಿ ಅಳವಡಿಸಿಕೊಂಡಿರುವ ಶಿಸ್ತು ಮತ್ತು ಕಟ್ಟಪಾಡು ಆದರ್ಶಮಯವಾದುದೆಂದು ವಿದ್ವಾನ್ ಭಾಸ್ಕರಭಟ್ಟ ಅವರು ಹೇಳಿದರು.

ಹಿರಿಯ ಮತ್ತು ಕಿರಿಯರೆಂಬ ಭೇದಭಾವವಿಲ್ಲದೆ ಶರ್ಮರು ಹಲವು ತಾತ್ವಿಕ ಸಂಗತಿಗಳ ಬಗ್ಗೆ ಆಸಕ್ತಿಯಿಂದ ಚರ್ಚೆ ನಡೆಸುವುದು ಅವರ ವಿಶಾಲ ಮನೋಭಾವನೆಗೆ ಒಂದು ತಕ್ಕ ಉದಾಹರಣೆಯೆಂದು ಮಹಾಬಲೇಶ್ವರ ಭಟ್ಟರು ಹೇಳಿದರು.

ಸಂಸ್ಕೃತ ಭಾಷೆಯ ಪ್ರಾಧ್ಯಾಪಕರಾಗಿ ರಂಗನಾಥ ಶರ್ಮರು ತಮ್ಮ ಸಹೋದ್ಯೋಗಿಗಳ ಜೊತೆ ನಡೆಸುತ್ತಿದ್ದ ತಾತ್ವಿಕ ವಿಚಾರ ಮಂಥನ ಹಾಗೂ ಅವರು ತೋರುತ್ತಿದ್ದ ಪ್ರೀತ್ಯಾದರವನ್ನು ಜಿ. ಚನ್ನವೀರಸ್ವಾಮಿ ಮೆಲಕು ಹಾಕಿದರು. ಶರ್ಮರ ಸರಳ ವ್ಯಕ್ತಿತ್ವ ಮತ್ತು ಪ್ರಚಂಡ ಪಾಂಡಿತ್ಯದ ಸಾಮರ್ಥ್ಯವನ್ನು ವಿದ್ವಾನ್ ಟಿ. ಕೇಶವಭಟ್ಟರು ಪ್ರಶಂಸಿದರು.

ಇದಕ್ಕೂ ಮುನ್ನ ಶತಾವಧಾನಿ ವಿದ್ವಾನ್ ಆರ್ ಗಣೇಶ್ ಮತ್ತು ರಾಮಚಂದ್ರ ಶರ್ಮ ತ್ಯಾಗಲಿಯವರ ನೇತೃತ್ವದಲ್ಲಿ ಸಂಸ್ಕೃತ ಕಾವ್ಯ ವಿಹಾರ ಅಂತ್ಯಾಕ್ಷರಿ ಸ್ಪರ್ಧೆಯೊಂದು ನಡೆಯಿತು. ನೃತ್ಯ ನಾಟಕಾಭಿನಯ ತಂಡದಿಂದ ನೃತ್ಯ ರೂಪಕವೂ ಆಕರ್ಷಕ ರೀತಿಯಲ್ಲಿ ಈ ಸಂದರ್ಭದಲ್ಲಿ ಪ್ರದರ್ಶನಗೊಂಡಿತು.

ಶ್ರೀರಾಮಚಂದ್ರನು ವಿಶ್ವಾಮಿತ್ರ ಋಷಿಯ ಜೊತೆ ಕಾಡಿಗೆ ಹೋಗುವ 'ರಾಮ ಕಥಾ ಸುಧಾ' ಪ್ರಸಂಗವನ್ನು ವಿದ್ವಾನ್ ಎಚ್.ಆರ್. ಕೇಶವಮೂರ್ತಿ ತಮ್ಮ ಸುಶ್ರಾವ್ಯಕಂಠದಿಂದ ಸಂಸ್ಕೃತದಲ್ಲಿ ಹಾಡಿದಾಗ ಎಲ್ಲರೂ ತಲೆದೂಗುವರೀತಿಯಲ್ಲಿ ವಿದ್ವಾನ್ ಮಾರ್ಕಂಡೇಯ ಅವಧಾನಿಯವರು ಕೇಶವ ಮೂರ್ತಿಗಳ ಸಂಸ್ಕೃತ ಗಾಯನಕ್ಕೆ ಕನ್ನಡದಲ್ಲಿ ವ್ಯಾಖ್ಯಾನವನ್ನು ನೀಡಿದರು.

ಸಾ.ಕೃ. ರಾಮಚಂದ್ರರಾವ್, ಟಿ. ಶ್ರೀನಿವಾಸ ಅಯ್ಯಂಗಾರ್, ಎ. ರಾಮಸ್ವಾಮಿ ಅಯ್ಯಂಗಾರ್ ಮತ್ತು ಓ.ಎನ್. ಪದ್ಮನಾಭನ್ ಅವರು ರಾಮಾಯಣಾಂತರಂಗ ಕುರಿತು ಈ ಸಂದರ್ಭದಲ್ಲಿ ಉಪನ್ಯಾಸಗಳನ್ನು ನೀಡಿದರು.